PÀ£ÁðlPÀ¸À

ರಾಷ್ಟ್ರೀಯ ಬಾಲ ಕಾರ್ಮಿಕರ ಯೋಜನಾ ಸಂಘ, (ರಿ)
ಜಿಲ್ಲಾಧಿಕಾರಿಗಳ ಕಾರ್ಯಾಲಯ ಆವರಣ, ಧಾರವಾಡ
ದೂರವಾಣಿ: 0836-2748817
(ಫ್ಯಾಕ್ಸ್) 0836-2747102

National Child Labour Project Society ®
Dy.Commr.Office Premises, Dharwad
Office Ph.No. 0836-2748817
Fax No. 0836-2747102
*e-mail* :nclpdharwad@yahoo.com

ಕ್ರ: ಎನ್‌ಸಿಎಲ್‌ಪಿ/ಸಿಬ್ಬಂದಿ ನೇಮಕಾತಿ/ಸಿಆರ್-01/202021/71 ದಿನಾಂಕ 17.03.2021

--: ಪತ್ರಿಕಾ ಪ್ರಕಟಣೆ :--

ವಿಷಯ: ರಾಜ್ಯ ಬಾಲಕಾರ್ಮಿಕ ನಿರ್ಮೂಲನೆ ಕ್ರಿಯಾಯೋಜನೆ ಅನ್ವಯ ಜಿಲ್ಲಾಬಾಲಕಾರ್ಮಿಕ ಯೋಜನಾ ಸೊಸಾಯಿಟಿಯ ಯೋಜನಾ ನಿರ್ದೇಶಕರಹುದ್ದೆಗೆ ಗೌರವಧನದ ಆಧಾರದ ಮೇಲೆ ತಾತ್ಕಾಲಿಕವಾಗಿ ನೇಮಕಾತಿ ಮಾಡುವ ಕುರಿತು.

ಉಲ್ಲೇಖ:
1. ಮಾನ್ಯ ಕಾರ್ಮಿಕ ಆಯುಕ್ತರು,ಬೆಂಗಳೂರುರವರ ಕಚೇರಿ ಜ್ಞಾಪನಾ ಸಂಖ್ಯೆ ಸುತ್ತೋಲೆ ಸಂಖ್ಯೆ: ಕೆವಿಸ್‌ಸಿವಿಲ್‌ಇಪಿಎಸ್/ಸಿಆರ್-69/2020-21ದಿ:18-02-2021.
2. ಮಾನ್ಯ ಜಿಲ್ಲಾಧಿಕಾರಿಗಳು, ಹಾಗೂ ಅಧ್ಯಕ್ಷರು, ರಾಷ್ಟ್ರೀಯ ಬಾಲ ಕಾರ್ಮಿಕವ ಯೋಜನಾ ಸಂಸ್ಥೆ, (ರಿ) ಇವರ ಕಂಡಿಕೆ ಅನುಮೋದನೆ ದಿನಾಂಕ 17.03.2021.

ಪುನರ್‌ರಚಿತ ರಾಜ್ಯ ಬಾಲಕಾರ್ಮಿಕ ನಿರ್ಮೂಲನೆ ಕ್ರಿಯಾಯೋಜನೆ ಅನ್ವಯ ಧಾರವಾಡ ಜಿಲ್ಲೆಯ ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘದಲ್ಲಿಗೌರವಧನದ ಆಧಾರದ ಮೇಲೆ ಸಿಬ್ಬಂದಿಯ ನೇಮಕಾತಿ ಕುರಿತು ಈ ಕೆಳಕಂಡ ಹುದ್ದೆಗೆ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಅ. ಸಂ | ಹುದ್ದೆಯ ಹೆಸರು | ನೀಡಲಾಗುವ ಗೌರವಧನ | ವಿದ್ಯಾರ್ಹತೆ ಮತ್ತು ಅರ್ಹತೆಗಳು |
|---|---|---|---|
| 1 | ಯೋಜನಾ ನಿರ್ದೇಶಕ | 19,965/- | 1. ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ/ ಎಮ್.ಎಸ್.ಡಬ್ಲ್ಯೂ/ ಅಭಿವೃದ್ಧಿ ಅಧ್ಯಯನ/ ಲಾಭ ರಹಿತ ಸಂಸ್ಥೆಗಳ (ಎನ್.ಜಿ.ಓ), ನಿರ್ವಹಣಾ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು.<br>2. ವಿವಿಧ ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿದ ಕುರಿತು 5 ವರ್ಷಗಳ ಅನುಭವ ಹೊಂದಿರಬೇಕು. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಅನುಭವ ಹೊಂದಿದವರಿಗೆ ಆದ್ಯತೆಯನ್ನು ನೀಡಲಾಗುವುದು.<br>3. ಕನ್ನಡ ಮತ್ತು ಇಂಗ್ಲೀಷ ಮಾತನಾಡುವ ಹಾಗೂ ಬರೆಯುವಲ್ಲಿ ಉತ್ತಮ ಕೌಶಲ್ಯ ಹೊಂದಿರಬೇಕು. |

Scanned with CamScanner

| | | | |
|---|---|---|---|
| | | | 4. ಕಂಪ್ಯೂಟರ ಜ್ಞಾನವನ್ನು ಹೊಂದಿರುವುದು ಅವಶ್ಯವಾಗಿರುತ್ತದೆ. (ಎಮ್.ಎಸ್. ಆಫೀಸ್, ಇಂಟರನೆಟ್ ಆಪರೇಷನ್ ಕಡ್ಡಾಯ)<br>5. 40 ವರ್ಷ ವಯೋಮಾನ ಮೀರಿರಬಾರದು<br>6. ಕಛೇರಿ ಲೆಕ್ಕಪತ್ರಗಳವ್ಯವಹಾರವನ್ನು ಅರಿತಿರಬೇಕು.<br>7. ಯಾವುದೇ ಸರ್ಕಾರಿ ಕೆಲಸದಿಂದ ವಜಾಗೊಂಡಿರುವ, ನಿವೃತ್ತಿ ಹೊಂದಿರುವ ಮತ್ತು ಸರ್ಕಾರಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಯಾಗಿರಬಾರದು. |

1. ಅರ್ಜಿಯನ್ನು ಸಲ್ಲಿಸಲು ನಿಗದಿತ ನಮೂನೆಗಳನ್ನು ಯೋಜನಾ ನಿರ್ದೇಶಕರು, ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಇವರಲ್ಲಿ ಪಡೆಯಬಹುದು.
2. ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ: 20.04.2021ರ ಸಂಜೆ: 5-00 ಗಂಟೆಯ ಒಳಗಾಗಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ, ಧಾರವಾಡ ಇವರಿಗೆ ತಲುಪಿಸಬೇಕು.
3. ಅವಧಿ ಮೀರಿ ಬಂದ ಹಾಗೂ ಅಪೂರ್ಣ ಮಾಹಿತಿಯಿರುವ ಅರ್ಜಿಗಳನ್ನುತಿರಸ್ಕರಿಸಲಾಗುವುದು.
4. ಅರ್ಜಿಯಲ್ಲಿ ನಮೂದಿಸಿದ ಎಲ್ಲ ದಾಖಲೆಗಳ ದೃಢೀಕೃತ ನಕಲು ಪ್ರತಿಗಳನ್ನು ಲಗತ್ತಿಸಬೇಕು.
5. ಅರ್ಜಿ ನಮೂನೆ ಮತ್ತು ಪತ್ರಿಕಾ ಪ್ರಕಟಣೆಯವಿವರಗಳನ್ನು http:// dharwad.nic.in ಈ ವೆಬ್ ಸೈಟ್‌ನಲ್ಲಿಯೂ ನೋಡಬಹುದು.

**ಮಾನದಂಡಗಳು :**

1. ಯೋಜನಾ ನಿರ್ದೇಶಕರ ಹುದ್ದೆಯು ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ಒಪ್ಪಂದದ ಕರಾರಿಗೆ ಒಳಪಟ್ಟಿದ್ದಾಗಿದ್ದು, ನೇಮಕಾತಿಗಾಗಿ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಮೊದಲ ಹಂತದ ಸಂದರ್ಶನ ನಡೆಸಿ, ಅದರಲ್ಲಿ 03 ಅರ್ಹ ಅಭ್ಯರ್ಥಿಗಳ ವಿವರಗಳನ್ನು ಕಾರ್ಮಿಕ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆಯುವ ಎರಡನೇ ಹಾಗೂ ಅಂತಿಮ ಹಂತದಲ್ಲಿ ಆಯ್ಕೆ ಮಾಡಲಾಗುವುದು.
2. ಕಂಪ್ಯೂಟರ್ ಪರೀಕ್ಷೆ ಹಾಗೂ ನೇರ ಸಂದರ್ಶನ.
3. ಅನುಭವ, ಕೌಶಲ್ಯ ಮತ್ತು ಕಾರ್ಯದಕ್ಷತೆ ಹೊಂದಿರಬೇಕು.
4. ಆಯ್ಕೆ ಪ್ರಕ್ರಿಯೆಯಲ್ಲಿನ ಎಲ್ಲ ಬದಲಾವಣೆಗಳು ಜಿಲ್ಲಾ ಮಟ್ಟದ ಆಯ್ಕೆ ಸಮಿತಿಯ ಅಂತಿಮ ನಿರ್ಣಯಗಳಿಗೆ ಒಳಪಟ್ಟಿರುತ್ತದೆ.

Patil

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (ರಿ),
ಧಾರವಾಡ.

Scanned with CamScanner